ಶ್ರೀ ಆರ್. ಮುನಿಸ್ವಾಮಯ್ಯ.—ದೇವಸ್ಥಾನಗಳಲ್ಲಿ ಸ್ಕೂಲು ನಡೆಯುತ್ತ ಇರುವ ಕಡೆ ಹರಿಜನರ ಬಾಲಕರನ್ನು ಸೇರಿಸುತ್ತ ಇಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ. ಅವರನ್ನು ಸೇರಿಸಲೇಬೇಕು. That question does not arise. ಮಾನ್ಯ ಸದಸ್ಯರು ಹೇಳಿರುವ ಒಂದು ಕಡೆ ಆ ರೀತಿ ಆಗಿರಬಹುದು. ಬಾಕಿ ಕಡೆ ಸರ್ಕಾರದವರಿಗೆ ಆ ರೀತಿ ಆಗಿರುವುದು ಗೊತ್ತಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಆರೀತಿ ಆಗುತ್ತ ಇದೆ ಎಂದು ಈ ಸಭೆಯ ಮಾನ್ಯ ಸದಸ್ಯರು ತಮ್ಮ ಗಮನಕ್ಕೆ ತಂದರೆ ಇದಕ್ಕೆ ಸಂಬಂಧಪಟ್ಟಂಥ ಒಂದು ಸರ್ಕ್ಯುಲರ್ ಹೊರಡಿಸುವುದು ಒಳ್ಳೆಯದಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಲ್ಲ ದೇವಸ್ಥಾನಗಳಲ್ಲೂ ಸೇರಿಸಬೇಕೆಂದು ಆರ್ಡರ್ ಇದೆ. ಅನೇಕ ವರ್ಷಗಳಿಂದ ಸ್ಕೂಲುಗಳು ದೇವಸ್ಥಾನದಲ್ಲಿ ನಡೆಯುತ್ತಲೂ ಇವೆ. ಹಾಗಿರುವಾಗ ಈ 861ರ ಪೈಕಿ ಎಲ್ಲೋ ಒಂದು ಕಡೆ ದೂರು ಬಂದರೆ ಅದಕ್ಕೇ ಒಂದು ಜನರಲ್ ಸರ್ಕ್ಯುಲರ್ ಹೊರಡಿಸುವುದು ಸೂಕ್ತವಲ್ಲ.

ಶ್ರೀ ಡಿ. ಎಂ. ಗೋವಿಂದರಾಜು.—ದೇವಸ್ಥಾನಗಳಲ್ಲಿ ಸ್ಕೂಲುಗಳನ್ನು ನಡೆಸುವುದನ್ನು ತಪ್ಪಿಸುವುದು ಒಳ್ಳೆಯದಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ಸ್ಕೂಲುಗಳಿಗೆ ಪ್ರತ್ಯೇಕವಾಗಿ ಸ್ಥಂತ ಕಟ್ಟಡ ಇರುವುದು ಉತ್ತಮ. ಅದರ ಅಭಾವದಿಂದ ಈ ದೇವಸ್ಥಾನಗಳನ್ನು ಉಪಯೋಗಿಸಿಕೊಂಡು ಸಾರ್ವಜನಿಕ ಕಾರ್ಯ ಮುಂದುವರಿಯುತ್ತಿದೆ.

ಶ್ರೀ ಡಿ. ಎಂ. ಗೋವಿಂದರಾಜು.—ಇನ್ನು ಮುಂದಾದರೂ ದೇವಸ್ಥಾನಗಳಲ್ಲಿ ಸ್ಕೂಲುಗಳನ್ನು ನಡೆಸುವುದನ್ನು ಕಮ್ಮಿ ಮಾಡುವುದು ಒಳ್ಳೆಯದಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರಿ ಕಟ್ಟಡ ಇದ್ದರೆ ಆರೀತಿ ಮಾಡುವುದು ಒಳ್ಳೆಯದು.

ಶ್ರೀ ಮೈ. ಎಂ. ಚಂದ್ರಶೇಖರಯ್ಯ.—ಹತ್ತು ಸಾವಿರ ಪ್ರೈಮರಿ ಸ್ಕೂಲುಗಳು ಸಂಸ್ಥಾನದಲ್ಲಿವೆ. ಅವುಗಳಲ್ಲಿ 861 ಸ್ಥಳಗಳಲ್ಲಿ ದೇವಸ್ಥಾನಗಳಲ್ಲಿ ಸ್ಕೂಲು ನಡೆದರೆ ಮಕ್ಕಳಿಗೆ ಪಾಠ ಹೇಳಿಕೊಡುವುದಕ್ಕೆ ತೊಂದರೆ ಅಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ತೊಂದರೆ ಆಗುವುದಿಲ್ಲ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಈ 861 ಸ್ಥಳಗಳಲ್ಲಿ ಸರ್ಕಾರಿ ಕಟ್ಟಡಗಳನ್ನು ಕಟ್ಟಿಸಿಕೊಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಲ್ಲ ಪ್ರೈಮರಿ ಸ್ಕೂಲುಗಳೂ ಕೂಡ ಸರ್ಕಾರಿ ಕಟ್ಟಡಗಳಲ್ಲೇ ನಡೆಯಬೇಕೆಂಬುದು ಸರ್ಕಾರದ ನೀತಿ. ಆ ನಿಯಮವನ್ನು ಪಾಲಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಯಾರಾದರೂ ದಾನಗೀಯವರು ಸ್ಕೂಲು ಕಟ್ಟಡ ಕಟ್ಟಿಸಿಕೊಟ್ಟರೆ ಅದಕ್ಕೆ ಸರಿಯಾದ ಬಾಡಿಗೆ ಕೊಡಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೊಡಿಸುತ್ತೇವೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಹಳ್ಳಿಗಳ ಕಡೆ ಎರಡು-ಮೂರು ರೂಪಾಯಿ ಬಾಡಿಗೆ ಕೊಡುತ್ತೀರಿ. ಅದೇ ಪಟ್ಟಣಗಳಲ್ಲಿ ಆದರೆ 50-100 ರೂಪಾಯಿ ಕೊಡುತ್ತೀರಿ. ಆದ್ದರಿಂದ ಸರಿಯಾದ ಬಾಡಿಗೆ ಕೊಡಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ನ್ಯಾಯವಾದ ಬಾಡಿಗೆ ಕೊಡುವುದಕ್ಕೆ ಅಡ್ಡಿ ಇಲ್ಲ.

Depressed Class Scholarships (Middle Schools)

Q.—44. **Sri B. RACHIAH** (Yelandur—Scheduled Castes).—

Will the Government be pleased to state :—

(*a*) the total number of applications received from the students studying in Middle Schools for the award of Depressed Class scholarships during the current year (districtwise figures are requested) ;

(*b*) the number of scholarships awarded ;

(*c*) the additional amount required for the award of scholarships for all the applicants ?

A.—**Sri A. G. RAMACHANDRA RAO** (Minister for Law and Education).—

(*a*) and (*b*).—

Sl. No.	*Name of District*		*No. of applications received.*
1	Bangalore City District	...	613
2	Bangalore District	...	400
3	Mysore District	...	606
4	Shimoga District	...	161
5	Hassan District	...	174
6	Kolar District	...	887
7	Tumkur District	...	425
8	Mandya District	...	519
9	Chitaldrug District	...	202
10	Chickmagalur District	...	117
11	Bellary District	...	100

Sl. No.	*Name of District*		*No. of scholarships awarded.*
1	Bangalore City District	...	173
2	Bangalore District	...	81
3	Mysore District	...	132
4	Shimoga District	...	29
5	Hassan District	...	46
6	Kolar District	...	148
7	Tumkur District	...	98
8	Mandya District	...	100
9	Chitaldrug District	...	71
10	Chickmagalur District	...	20
11	Bellary District	...	65

(*c*) An additional sum of Rs. 2,03,130 is required for award of

(SRI A. G. RAMACHANDRA RAO.) scholarships to all applicants. (The additional amount required for awarding scholarships to all the applicants at Rs. 18-11-0 per annum will be Rs. 660 for Bellary District only).

ಶ್ರೀ ಬಿ. ರಾಚಯ್ಯ.—ಎರಡು ಲಕ್ಷ ಚಿಲ್ಲರೆ ರೂಪಾಯಿಗಳು ಬೇಕಾಗುತ್ತವೆ ಎಂದು ಹೇಳಿದ್ದೀರಿ. ಕಳೆದ ಮೂರು ವರ್ಷದಿಂದ ಏನಾದರೂ ವರ್ಷೇ ವರ್ಷೇ ಈ ಭಾಗದಲ್ಲಿ ಹೆಚ್ಚಿಗೆ ಗ್ರಾಂಟು ಕೊಟ್ಟಿದ್ದೀರಾ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಗ್ರಾಂಟನ್ನು ಹೆಚ್ಚಿಗೆ ಮಾಡಿದ್ದು ಜ್ಞಾಪಕ ಇಲ್ಲ. ಇರುವಷ್ಟೇ ಇದೆ.

ಶ್ರೀ ಬಿ. ರಾಚಯ್ಯ.—ಯೂನಿವರ್ಸಿಟಿಯಲ್ಲಿ ಓದುತ್ತಾ ಇರತಕ್ಕ ಡಿಪ್ರೆಸ್ಡ್ ಕ್ಲಾಸ್ ವಿದ್ಯಾರ್ಥಿಗಳಿಗೆ ಕೊಡುವ ಸ್ಕಾಲರ್‌ಷಿಪ್ ಕಡಿಮೆಮಾಡಿ, ಈ ಭಾಗಗಳಿಗೆ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ತಮ್ಮನ್ನು ಒತ್ತಾಯ ಈ ಮಾನ್ಯ ಸಭೆಯಲ್ಲಿ ಮಾಡುತ್ತಾ ಇಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡುತ್ತಾ ಇದ್ದಾರೆ.

ಶ್ರೀ ಬಿ. ರಾಚಯ್ಯ.—ಅದರ ಮೇಲೆ ಏಕೆ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಂಡಿಯಾ ಸರ್ಕಾರದ ಗ್ರಾಂಟು ಬಂದದ್ದರಿಂದ ಯೂನಿವರ್ಸಿಟಿಯಲ್ಲಿ ಆ ರೀತಿ ಸ್ಕಾಲರ್‌ಷಿಪ್ ಕೊಡಲಿಕ್ಕೆ ಅವಕಾಶ ವಿದೆ. ಅದು ಖಾಯಂ ಆಗಿ ಇರುತ್ತದೆಯೋ ಇಲ್ಲವೋ ಎಂಬ ವಿಷಯವನ್ನು ಪರಿಶೀಲನೆ ಮಾಡಬೇಕು.

ಶ್ರೀ ಬಿ. ರಾಚಯ್ಯ.—ಅದನ್ನು ರೀ ಅಪ್ರೋಪ್ರಿಯೇಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ರೀ ಅಪ್ರೋಪ್ರಿಯೇಟ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ. ರಾಚಯ್ಯ.—ಡಿಪ್ರೆಸ್ಡ್ ಕ್ಲಾಸ್ ಅಮಿಲಿಯೊರೇಷನ್ ಫಂಡ್‌ನಲ್ಲಿ ಸ್ವಲ್ಪ ಭಾಗದ ಹಣವನ್ನು ಇದಕ್ಕೆ ಕೊಡುವುದು ಉತ್ತಮವಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗಾದರೆ ಉತ್ತಮ.

ಶ್ರೀ ಜಿ. ಪುಟ್ಟಸ್ವಾಮಿ.—ನಿಮ್ನ ವರ್ಗದವರ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೂ ನಿಮ್ನ ವರ್ಗದವರಲ್ಲದ ಇತರ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೂ ಹೋಲಿಸಿದರೆ ಇವರಲ್ಲಿ ವಿದ್ಯಾವಂತರ ಸಂಖ್ಯೆ ಬಹಳ ಕಡಿಮೆ ಎನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು.—ಅದು ದೇಶಕ್ಕೆಲ್ಲಾ ಗೊತ್ತು. ಅದನ್ನೇನು ಕೇಳುತ್ತೀರಿ ?

ಶ್ರೀ ಜಿ. ಪುಟ್ಟಸ್ವಾಮಿ.—ಹಾಲಿ ವಿದ್ಯಾರ್ಥಿ ವೇತನ ಕೊಡುತ್ತಾ ಇರುವುದು ಬಹಳ ಕಡಿಮೆ ಎಂದು ನನ್ನ ಪ್ರಶ್ನೆ. ವಿದ್ಯಾರ್ಥಿವೇತನ ಹೆಚ್ಚಿಸುವುದಕ್ಕೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಣದ ಅಭಾವದಿಂದ ಹೆಚ್ಚುಮಾಡುವುದಕ್ಕೆ ಆಗಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ನಿಮ್ನವರ್ಗದವರ ಅಮಿಲಿಯೊರೇಷನ್ ಫಂಡಿನಿಂದ ಕೊಡುವುದಕ್ಕೆ ಏನಾದರೂ ಯೋಚನೆ ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪಾಲಿಸಿ ಕಮಿಟಿಯವರು ಒಪ್ಪಿಕೊಂಡರೆ ಅದನ್ನು ಪರಿಶೀಲನೆ ಮಾಡುತ್ತೇವೆ.

Thirupathi Choultry (Removal of caste distinction)

Q.—109. Sri G. A. THIMMAPPA GOWDA (Arkalgud).—

Will the Government be pleased to state :—

whether they will refer to my question No. 419 tabled during the last session relating to the removal of discrimination on caste basis regarding food, etc., in Thirupathi Choultry run by this Government and state the action taken by them to remove this discrimination that is being still practised in the Thirupathi Choultry ?

A.—Sri A. G. RAMACHANDRA RAO (Minister for Law and Education).—

The matter has been examined at Departmental level and the proposals are under active consideration of Government.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಪ್ರಶ್ನೆ ಬರುತ್ತಿರುವುದು ಮೂರನೆಯ ಸಲವಲ್ಲವೆ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಎಷ್ಟನೇ ಸಲವೆಂದು ಗೊತ್ತಿಲ್ಲ. ಪ್ರಪೋಸಲ್‌ಗಳು ಬಂದಿವೆ. ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಸಂಬಂಧಪಟ್ಟ ಇಲಾಖೆಯವರು ಏನು ಪ್ರಪೋಸಲ್‌ಗಳನ್ನು ಹಾಕಿದ್ದಾರೆಂಬುದನ್ನು ತಿಳಿಸುತ್ತೀರಾ ?

Sri A. G. RAMACHANDRA RAO.—The matter has been examined at the Departmental level and the proposals are under the active consideration of the Government.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈಗಲೂ ಕೂಡ ತಿರುಪತಿ ಛತ್ರದಲ್ಲಿ ಜಾತಿ ಭೇದದ ಮೇಲೆ ಊಟೋಪಚಾರಗಳು ನಡೆಯುತ್ತಿವೆಯಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದುವರೆಗೂ ಹೇಗಿತ್ತೋ ಹಾಗೆಯೇ ನಡೆಯುತ್ತಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ರಾಜ್ಯಾಂಗದಲ್ಲಿಯೂ ಕೂಡ ಇದನ್ನು ನಿಷೇಧಿಸಿ ಜಾತಿಭೇದ ವಿರೋಧದು ಎಂದು ತೀರ್ಮಾನ ಮಾಡಿರುವಾಗ ತಿರುಪತಿ ಛತ್ರದ ವ್ಯವಸ್ಥೆಯನ್ನು ಹಿಂದಿನಂತೆಯೇ ನಡೆಸಿಕೊಂಡು ಬಂದರೆ ಜನರ ಮೇಲೆ ದುಷ್ಪರಿಣಾಮ ವುಂಟಾಗುತ್ತದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದರಲ್ಲಿ ಕೆಲವು ಟ್ರಸ್ಟ್‌ಗಳಿವೆ. ಅವುಗಳು ಏತಕ್ಕೋಸ್ಕರವೆಂದು